ಸಭೆ ಒಪ್ಪುವುದಾದರೆ ಈಗ ಸಭೆಯನ್ನು ಮುಂದೂಡಿ ಮತ್ತೆ ಮೂರು ಗಂಟೆಗೆ ಸೇರುವುದಕ್ಕೆ ನನ್ನದಂತೂ ಅಭ್ಯಂತರ ಇಲ್ಲ.

(ಸಭೆ ಒಪ್ಪಿಗೆ ಸೂಚಿಸಿತು)

ಈಗ ಸದನವು ಮುಂದೂಡಲ್ಪಟ್ಟು ಮತ್ತು ಪುನಃ ಮೂರು ಗಂಟೆಗೆ ಸೇರುತ್ತದೆ.

(ಸದನವು 1.43 ಗಂಟೆಗೆ ಮುಂದೂಡಲ್ಪಟ್ಟು ಪುನಃ ಮಧ್ಯಾಹ್ನ 3 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು ಪುನಃ ಮಧ್ಯಾಹ್ನ 3 ಘಂಟೆ 25 ನಿಮಿಷಕ್ಕೆ ಸೇರಿತು.)

ಸನ್ಮಾನ್ಯ ಉಪಸಭಾಧ್ಯಕ್ಷಣೆ

ಯವರಾದ ಶ್ರೀಮತಿ ನಾಗಮ್ಮ ಸಿ. ಕೇಶವಮೂರ್ತಿ ಅವರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಿದ್ದರು.)

ಉಪಾಧ್ಯಕ್ಷಣೀಯವರು : ಈಗ ಮಾನ್ಯ ಶಿಕ್ಷಣ ಮಂತ್ರಿಗಳು ಒಂದು ಹೇಳಿಕೆಯನ್ನು ಕೊಡುತ್ತಾರೆ.

ಮಂತ್ರಿಯವರಿಂದ ಹೇಳಿಕೆ

ದ್ವಿತೀಯ ಪಿ.ಯು.ಸಿ.ಯ ಗಣಿತ ಶಾಸ್ತ್ರದ ಪ್ರಶ್ನೆಪತ್ರಿಕೆ ಬಯಲಾಗಿದೆ ಎನ್ನುವ ಸುದ್ದಿಯ ಕುರಿತು ವಿವರಣೆ.

ಶ್ರೀ ಎಂ. ವೀರಪ್ಪಮೊಯಿಲಿ : ಮಾನ್ಯ ಉಪಾಧ್ಯಕ್ಷಣೆಯವರೇ, ತಮ್ಮ ಅನುಮತಿಯನ್ನು ಪಡೆದು ಈ ಕೆಳಕಂಡ ಹೇಳಿಕೆಯನ್ನು ಕೊಡಲು ಇಚ್ಛಿಸುತ್ತೇನೆ.

ದ್ವಿತೀಯ ಪದವಿ ಪೂರ್ವ ಪರೀಕ್ಷೆಗಳು ಇಂದು ಪ್ರಾರಂಭವಾಗಿದ್ದು, ಗಣಿತಶಾಸ್ತ್ರದ ಪರೀಕ್ಷೆಯು ಇಂದು ನಡೆಯಿತು. ಈ ಪರೀಕ್ಷೆ ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ, ಕೆಲವು ವಿದ್ಯಾರ್ಥಿಗಳು, ಪದವಿ ಪೂರ್ವ ಇಲಾಖೆಯ ನಿರ್ದೇಶಕರಿಗೆ, ಪ್ರಶ್ನೆ ಪತ್ರಿಕೆ ಬಯಲಾಗಿದೆ ಎಂದು ಸುದ್ದಿ ಕೊಟ್ಟು, ಸಂಬಂಧಪಟ್ಟ ನಕಲಿ ಪತ್ರಿಕೆಯನ್ನು ಕೊಟ್ಟಾಗ, ಅದನ್ನು ಅವರು ಅಸಲೀ ಪ್ರಶ್ನೆ ಪತ್ರಿಕೆಯೊಂದಿಗೆ ತಾಳಿ ಮಾಡಿ ನೋಡಿದ್ದಾರೆ. ನಕಲೀ ಪ್ರಶ್ನೆ ಪತ್ರಿಕೆಯಲ್ಲಿರುವ ಪ್ರಶ್ನೆಗಳಿಗೂ, ಅಸಲೀ ಪ್ರಶ್ನೆ ಪತ್ರಿಕೆಯಲ್ಲಿರುವ ಪ್ರಶ್ನೆಗಳಿಗೂ ಯಾವುದೇ ಸಾಮ್ಯತೆ ಕಂಡುಬಂದಿಲ್ಲ ಹಾಗೂ ನಕಲೀ ಪ್ರಶ್ನೆ ಪತ್ರಿಕೆಗಳನ್ನು ದುರುದ್ದೇಶದಿಂದ ಕೆಲವು ದುಷ್ಕರ್ಮಿಗಳು ದುರ್ಲಾಭಪಡೆಯುವ ದೃಷ್ಟಿಯಿಂದಲೂ ಇಂತಹ ಪ್ರಶ್ನೆ ಪತ್ರಿಕೆ ತಯಾರಿಸಿ ಮಾರಾಟ ಮಾಡುತ್ತಿದ್ದರೆಂದು ತಿಳಿದು ಬಂದಿದೆ.

ಈ ವಿಚಾರದಲ್ಲಿ ಪೊಲೀಸರು ತೀವ್ರ ಕಾರ್ಯಕ್ರಮ ತೆಗೆದುಕೊಂಡಿದ್ದು, ಇಂತಹ ದುಷ್ಕರ್ಮಿಗಳ ಬಗ್ಗೆ ಇಡೀ ರಾಜ್ಯದಲ್ಲಿ ನಿಗಾ ಇಟ್ಟಿದ್ದಾರೆ ಮತ್ತು ಬೆಂಗಳೂರು ನಗರದಲ್ಲಿ ವಿಶೇಷ ಪೊಲೀಸ್ ದಳವನ್ನು ನಿಯುಕ್ತಿಗೊಳಿಸಿದ್ದು ಈ ದಳವು ಈ ಬಗ್ಗೆ ತೀವ್ರ . ನಿಗಾ ವಹಿಸುತ್ತಿದ್ದು, ಇಂತಹ ದುಷ್ಕೃತ್ಯ ಕಂಡುಬಂದಲ್ಲಿ, ಅಂತಹವರ ವಿರುದ್ಧ ತೀವ್ರ ಕ್ರಮ ತೆಗೆದುಕೊಳ್ಳಲಾಗುವುದು.

ಪ್ರಶ್ನೆ ಪತ್ರಿಕೆಗಳ ಜೋಪಾನದ ಬಗ್ಗೆ ಸರ್ಕಾರವು ತೀವ್ರ ಹಾಗೂ ಸೂಕ್ತವಾದ ವ್ಯವಸ್ಥೆ ಮಾಡಿದ್ದು, ಪ್ರಶ್ನೆ ಪತ್ರಿಕೆಗಳು ಬಯಲಾಗುವ ಸಾಧ್ಯತೆ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳಬಯಸುತ್ತೇನೆ.

ಕೆಲವು ದುಷ್ಕರ್ಮಿಗಳು, ನಕಲೀ ಪ್ರಶ್ನೆ ಪತ್ರಿಕೆಗಳನ್ನು ಸೃಷ್ಟಿಸಿ, ದುರ್ಲಾಭ ಪಡೆಯಲು ಹಾಗೂ ವಿದ್ಯಾರ್ಥಿಗಳು ಗೊಂದಲವನ್ನುಂಟು ಮಾಡಲು ಪ್ರಯತ್ನಿಸುತ್ತಿರುವುದು ಕಂಡು ಬಂದಲ್ಲಿ, ವಿದ್ಯಾರ್ಥಿಗಳು ಪೋಷಕರು ಹಾಗೂ ಸಾರ್ವಜನಿಕರು, ಕೂಡಲೇ ಹತ್ತಿರದ ಪೊಲೀಸ್ ಠಾಣೆಗೆ ತಿಳಿಸುವಂತೆ, ನಾನು ಕಳಕಳಿಯ ಮನವಿ ಮಾಡುತ್ತೇನೆ.

ಅಲ್ಲದೇ, ಇಂತಹ ಆಮಿಷಗಳಿಗೆ ಒಳಗಾಗದೇ, ಯಾವುದೇ ಆತಂಕವಿಲ್ಲದೇ ಪರೀಕ್ಷೆಗಳಲ್ಲಿ ಬರೆಯುವಂತೆ ವಿದ್ಯಾರ್ಥಿಗಳಲ್ಲಿ ಕೇಳಿಕೊಳ್ಳುತ್ತೇನೆ.

ಈ ಪ್ರಶ್ನೆ ಪತ್ರಿಕೆಯ ಒರಿಜಿನಲ್ ಮತ್ತು ಪೊಲೀಸರು ಕಂಡುಹಿಡಿದಂಥ ಮ್ಯಾಟರ್ ಕೂಡಾ ನನ್ನಲ್ಲಿ ಇದೆ. ಫಾರ್ ಯುವರ್ ಇನ್‌ಫರ್ಮೇಷನ್ ಇದು ಒರಿಜಿನಲ್ ಇದು ನಕಲಿ (ಎರಡನ್ನೂ ತೋರಿಸಿದರು) ಪ್ರಶ್ನೆಗಳಲ್ಲಿ ಅದಕ್ಕೂ ಇದಕ್ಕೂ ಹೋಲಿಕೆ ಇಲ್ಲ. ಆದರೆ ಜನಗಳು ಏನು ಮಾಡುತ್ತಾರೆ ಎಂದರೆ ಬ್ಲಾಕ್ ಮೇಲ್ ಮಾಡುತ್ತಾರೆ. ಒಂದು ಗ್ಯಾಂಗ್ ಇದೆ. ಬೇರೆ ಬೇರೆ ಸುಳಿವೂ ಕೂಡಾ ಸಿಕ್ಕಿದೆ. ಕಾರನ್ನೂ ಕೂಡಾ ನಾವು ಅಂದಾಜು ಮಾಡಿ ಇಟ್ಟಿದ್ದೇವೆ. ಯಾವುದೇ ಜಾಲವನ್ನು ಉಪಯೋಗ ಮಾಡಿಕೊಂಡು ಮಕ್ಕಳನ್ನು ಹೇದರಿಸಿ ಲಾಭ ಮಾಡಬೇಕೆಂದಿರುವವರನ್ನು ನಾವು ಗಮನದಲ್ಲಿ ಇಟ್ಟಿದ್ದೇವೆ.

ಆ ಜಾಲ ಏನು ಇದೆ ಆ ಜಾಲವನ್ನು ಹೊಡೆಯತಕ್ಕಂಥ ಪ್ರಯತ್ನ ನಾವು ಈಗಾಗಲೇ ಮಾಡಿ ನಮ್ಮ ಬೆಂಗಳೂರು ಪೊಲೀಸ್ ಕಮೀಷನರ್‌ರವರ ಜೊತೆಯಲ್ಲಿ ನಾನು ಈಗಾಗಲೆ ಮಾತನಾಡಿದ್ದೇನೆ. ಮತ್ತು ಇದರ ಬಗ್ಗೆ ಕೆಲವು ವಿಚಾರಗಳು ತಿಳಿದಿದೆ. ಇನ್ನು ನಾವು ದಾಖಲೆಗಳನ್ನು ಅಥವಾ ಎವಿಡೆನ್ಸ್ ಹಿಡಿಡು ಕ್ಲೂ ಹಿಡಿದು ಯಾರ್ಯಾರು ಇದರಲ್ಲಿ ಒಳಗಾಗಿದ್ದಾರೆ ಅಧ್ಯಾಪಕರು ಇರಲಿ ಯಾರೇ ಆಗಿರಲಿ ಯಾರೇ ಇದ್ದರೂ ಕೂಡ ನಿರ್ದಾಕ್ಷಿಣ್ಯವಾಗಿ ಹಿಡಿದು ಬಲಿ ಹಾಕತಕ್ಕಂಥ ಕೆಲಸ ಸರ್ಕಾರ ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಈ ಜಾಲದ ಬಗ್ಗೆ ತಾವು ಜಾಗರೂಕತೆಯಿಂದ ಎಚ್ಚರಿಕೆ ವಹಿಸಬೇಕು. ಹತ್ತಾರು ವರ್ಷಗಳಿಂದ ಈ ರೀತಿಯಾದಂಥ ವರ್ತನೆ ನಡೆಯುತ್ತಿದೆ. ಇದೇನು ಹೊಸದಲ್ಲ. ತಾವು ತಕ್ಷಣ ಶೀಘ್ರವಾಗಿ ಎಚ್ಚರಿಕೆ ವಹಿಸಿ ಮಾಡಿರತಕ್ಕಂಥ ಕೆಲಸ ನಿಜವಾಗಿಯೂ ಸಂತೋಷಪಡತಕ್ಕಂಥಾ ವಿಷಯ. ಇದು ನಿಜವಾಗಿ ಕಣ್ಣು ತಪ್ಪಿಸಿ ನಡೆದಿರತಕ್ಕಂಥಾದ್ದು ಇದು ಬೆಂಗಳೂರಿನಲ್ಲಿ ಮಾತ್ರವಲ್ಲ ಇಡೀ ರಾಜ್ಯದಲ್ಲಿ ನಡೆಯುತ್ತಿದೆ. ರಾಜ್ಯದಲ್ಲಿ ಇದು ಒಂದು ವ್ಯಾಪಾರ ಆಗಿದೆ. ಒಂದು ಪೇಪರ್‌ಗೆ ಇಂತಿಷ್ಟು ಎಂದು ವ್ಯಾಪಾರ ನಡೆಯುತ್ತಿದೆ. ಲಕ್ಷಾಂತರ ರೂಪಾಯಿಗಳ ಸಂಪಾದನೆ ನಡೆಯುತ್ತಿದೆ. ಆದ್ದರಿಂದ ಇದು ಕೇವಲ ಬರೀ ಹೊರಗಿನ ಜನಗಳ ಅಲ್ಲ ಸರ್ಕಾರದ ಅಧಿಕಾರಿಗಳು ಒಳಗಡೆ ಕೆಲವರು ಇದ್ದಾರೆ ಎನ್ನುವ ಅನುಮಾನ ಜಾಸ್ತಿಯಾಗುತ್ತಿದೆ. ಈ ಬಗ್ಗೆ ಯಾವುದೇ ಉನ್ನತ ಮಟ್ಟದವರು ಇರಲಿ ಅವರ ಬಗ್ಗೆ ಸರ್ಕಾರ ತೀವ್ರ ಕ್ರಮ ಕೈಗೊಳ್ಳಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪಮೊಯ್ಲಿ : ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಸಿಂಧ್ಯಾರವರು ಕೊಟ್ಟ ಸಲಹೆ ಪ್ರಕಾರ ಅತ್ಯಂತ ಹೆಚ್ಚಿನ ನಿಗಾ ಮತ್ತು ಜಾಗ್ರತೆ ವಹಿಸುತ್ತೇವೆ.

ಉಪಾಧ್ಯಕ್ಷರು : ಆಯವ್ಯಯದ ಮೇಲೆ ಅರ್ಧಗಂಟೆ ಚರ್ಚೆ ಮುಂದುವರಿಸಿ ಆಮೇಲೆ ಅರ್ಧಗಂಟೆ ಚರ್ಚೆ ತೆಗೆದುಕೊಳ್ಳೋಣ.

ವಿತ್ತೀಯ ಕಾರ್ಯಕಲಾಪಗಳು

1991-92ನೇ ಸಾಲಿನ ಆಯವ್ಯಯದ ಮೇಲಿನ ಚರ್ಚೆ

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯ ಮಂತ್ರಿಗಳು 1991-92 ಆಯವ್ಯಯದ 94 ಪುಟಗಳ ಭಾಷಣವನ್ನು ಸದನದಲ್ಲಿ ಮಂಡಿಸಿದ್ದಾರೆ. ಇದರಲ್ಲಿ ಅನೇಕ ವಿಚಾರಗಳನ್ನು ಹೇಳಿದ್ದಾರೆ. ಇಬ್ಬರು ಹಣಕಾಸು ಸಚಿವರ ಭಾಷಣವನ್ನು ನಾವು ಇಲ್ಲಿಯವರೆಗೆ ಕೇಳಿದ್ದೇವೆ. ಅಂದರೆ